

ಚಿತ್ರದುರ್ಗದ ಮುರುಘಾ ಮಠದಲ್ಲಿ ಸಾಮೂಹಿಕ ಕಲ್ಯಾಣ ಮಹೋತ್ಸವದಲ್ಲಿ ದಾಂಪತ್ಯಕ್ಕೆ ಕಾಲಿಟ್ಟ ಜೋಡಿಗಳು

ವಿಶ್ವದ ಅತ್ಯಂತ ದುಬಾರಿ ಮದುವೆ ಎನ್ನುವ ಬಣ್ಣನೆಗೊಳಗಾಗಿರುವ, ಅನಂತ್ ಅಂಬಾನಿ ಮತ್ತು ರಾಧಿಕಾ ಮರ್ಚಂಟ್ ಅವರ ಮದುವೆಗೆ ಖರ್ಚಾದ ಮೊತ್ತ ಸುಮಾರು 600 ಮಿಲಿಯನ್ ಡಾಲರ್! ಅಂಬಾನಿ ಕುಟುಂಬದ ಗಳಿಕೆಗೆ ಹೋಲಿಸಿದರೆ ಮದುವೆಗೆ ಖರ್ಚಾದ ಮೊತ್ತ ತೀರಾ ಕಡಿಮೆ ಎನ್ನುವ ವಾದಗಳೂ ಇವೆ.

ಭಾರತದಲ್ಲಿ ಮಧ್ಯಮವರ್ಗದ ಕುಟುಂಬಗಳು ತಮ್ಮ ಗಳಿಕೆಯ ಬಹುಭಾಗವನ್ನು ಮದುವೆಗೆ ಖರ್ಚು ಮಾಡುವ ಹಿನ್ನೆಲೆಯಲ್ಲಿ, ಅಂಬಾನಿ ಕುಟುಂಬದ ಮದುವೆ ಭಾರತೀಯ ಸಾಮಾಜಿಕ ಸಂದರ್ಭದಲ್ಲಿ ವಿಶೇಷವಾದದ್ದೇನೂ ಅಲ್ಲ. ಭಾರತದಲ್ಲಿ ಮದುವೆ ಉದ್ಯಮದ ವಾರ್ಷಿಕ ವಹಿವಾಟಿನ ಪ್ರಮಾಣ ಸುಮಾರು 10 ಲಕ್ಷ ಕೋಟಿ ರೂಪಾಯಿ! ಈ ಬೃಹತ್ ಮೊತ್ತವೇ ಮದುವೆ ಎನ್ನುವ ಪ್ರಕ್ರಿಯೆ ಎಷ್ಟು ಸಂಕೀರ್ಣ ಎನ್ನುವುದನ್ನು ಸೂಚಿಸುವಂತಿದೆ.

ಭಾರತೀಯನೊಬ್ಬನ ಶಿಕ್ಷಣಕ್ಕಾಗಿ ಖರ್ಚು ಮಾಡುವ ಸರಾಸರಿ ವೆಚ್ಚಕ್ಕಿಂತ ಎರಡು ಪಟ್ಟು ಹಣವನ್ನು ಮದುವೆಯ ಮೇಲೆ ಖರ್ಚು ಮಾಡಲಾಗುತ್ತಿದೆ. ಭಾರತದಲ್ಲಿ ಪ್ರತಿ ವರ್ಷ 80 ಲಕ್ಷದಿಂದ 1 ಕೋಟಿ ಮದುವೆ ನಡೆಯುತ್ತವೆ ಎನ್ನುವ ಅಂದಾಜಿದೆ. ಚೀನಾದಲ್ಲಿ ವಾರ್ಷಿಕ 70–80 ಲಕ್ಷ ಮದುವೆಗಳು ನಡೆದರೆ, ಅಮೆರಿಕದಲ್ಲಿ ಈ ಪ್ರಮಾಣ 20–25 ಲಕ್ಷವಷ್ಟೇ.

ಆಭರಣ, ಜವಳಿ, ಆಟೊಮೊಬೈಲ್ ಹಾಗೂ ವಿದ್ಯುನ್ಮಾನ ಸಲಕರಣೆಗಳ ಉದ್ಯಮಗಳ ಲವಲವಿಕೆಗೂ ದೇಶದಲ್ಲಿನ ಮದುವೆ ಉದ್ಯಮಕ್ಕೂ ಅವಿನಾಭಾವ ಸಂಬಂಧವಿದೆ. ಒಂದು ದಿನದಿಂದ ಹಿಡಿದು ಹಲವು ದಿನಗಳವರೆಗೆ ವಿಸ್ತರಿಸಿಕೊಳ್ಳುವ ಮದುವೆಯ ಸಂಭ್ರಮ, ಬಂಧುಮಿತ್ರರ ಸಂತೋಷಕೂಟವಾಗಿಯೂ ಪರಿಣಮಿಸುತ್ತದೆ. ಬಂಧುಮಿತ್ರರ ನಡುವೆ ಕುಟುಂಬದ ಸ್ಥಾನಮಾನವನ್ನು ಬಿಂಬಿಸುವುದಕ್ಕಾಗಿ ಮದುವೆಯನ್ನು ನಿರ್ವಹಿಸುವ ಕುಟುಂಬ ತನ್ನ ಸಾಮರ್ಥ್ಯ ಮೀರಿ ಖರ್ಚು ಮಾಡುವುದಿದೆ.

ಮಕ್ಕಳ ಮದುವೆಯನ್ನು ಅದ್ದೂರಿಯಾಗಿ ಮಾಡುವುದು ಹಲವು ಪೋಷಕರಿಗೆ ಸಂತೋಷದ ಸಂಗತಿಯೂ ಹೌದು. ಮಗಳ ಮದುವೆಗಾಗಿ ಜೀವಮಾನದ ಗಳಿಕೆಯನ್ನೆಲ್ಲ ಖರ್ಚು ಮಾಡುವ ಪೋಷಕರಿದ್ದಾರೆ. ಮಕ್ಕಳ ಮದುವೆಯಿಂದಾಗಿ ದೊಡ್ಡ ಮೊತ್ತದ ಸಾಲದ ಸುಳಿಗೆ ಸಿಲುಕಿ, ಜೀವನವೆಲ್ಲ ಒದ್ದಾಡುವವರೂ ಇದ್ದಾರೆ. ಮದುವೆಗಾಗಿ ದುಬಾರಿ ವೆಚ್ಚ ಖರ್ಚು ಮಾಡುವುದು ಅನವಶ್ಯಕ ಎನ್ನುವುದನ್ನು ತಿಳಿದವರೂ, ಮದುವೆ ಸಂದರ್ಭದಲ್ಲಿ ಯಾವುದೋ ಒತ್ತಾಯ ಒತ್ತಡಗಳಿಗೆ ಮಣಿದು ತಮ್ಮ ನಿಲುವನ್ನು ಸಡಿಲಿಸಿಕೊಳ್ಳುವುದಿದೆ.

## ಮಾರುಕಟ್ಟೆಯ ಸರಕಾಗಿ ಮದುವೆ

ಮನುಷ್ಯನ ಜೀವನದ ಬಹು ಮುಖ್ಯ ಘಟ್ಟಗಳಲ್ಲಿ ಮದುವೆಯೂ ಒಂದು. ಅದಕ್ಕಾಗಿ ದೊಡ್ಡ ಸಂಭ್ರಮದ ಸನ್ನಿವೇಶವನ್ನೇ ಸೃಷ್ಟಿಸಲಾಗುತ್ತಿದೆ. ಸಿನಿಮಾ ಅಥವಾ ಟೀವಿಯ ಧಾರಾವಾಹಿಗಳಲ್ಲೂ ವೈಭವದ ಮದುವೆಯದೇ ಪಾರುಪತ್ಯ. ಅದಕ್ಕಾಗಿ ನಡೆಯುವ ಸಿದ್ಧತೆ, ಅಲಂಕಾರ ಮತ್ತು ಮದುವೆ ಸಂಭ್ರಮದ ಮೆರುಗು ವೀಕ್ಷಕರನ್ನು ಮರುಳು ಮಾಡುವಂತಿರುತ್ತವೆ. ಮದುವೆಯ ಬಗೆಗಿನ ವೀಕ್ಷಕರ ಸುಪ್ತ ಕನಸುಗಳನ್ನು ಪ್ರಚೋದಿಸುವಂತೆ ಕಿರುತೆರೆಯ ಕಥನಗಳಲ್ಲಿ ಹಲವು ದಿನಗಳ ಮದುವೆ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತದೆ. ಈ ಕಾಲ್ಪನಿಕ ಮದುವೆಗಳ ಜೊತೆಗೆ, ಸೆಲೆಬ್ರಿಟಿಗಳು ಹಾಗೂ ಸಿರಿವಂತರ ವೈಭೋಗದ ಮದುವೆಗಳು ಮಾಧ್ಯಮಗಳ ಮೂಲಕ ಜನಸಾಮಾನ್ಯರನ್ನು ತಲುಪಿ, ಮಾತು ಹಾಗೂ ನೋಟಕ್ಕೆ ರಂಜನೆಯ ಸರಕುಗಳಾಗುತ್ತವೆ.

ಅದ್ದೂರಿ ಮದುವೆಗಳ ಆಡಂಬರದ ನಡುವೆ, ಸರಳ ಮದುವೆಗಳೂ ಅಲ್ಲಲ್ಲಿ ನಡೆಯುತ್ತಿವೆ. ದುಂದಿಗೆ ಅವಕಾಶವಿಲ್ಲದ ಈ ಮದುವೆಗಳು ಆದರ್ಶದ ಕಾರಣಕ್ಕಾಗಿ ನಡೆಯುವುದೂ ಇದೆ.

## ಸ್ವಾಭಿಮಾನದ ಮದುವೆ

ಸಾಂಪ್ರದಾಯಿಕ ಆಚರಣೆಯನ್ನು ವಿರೋಧಿಸಿ ತಮಿಳುನಾಡಿನಲ್ಲಿ ಪೆರಿಯಾರ್ 'ಸ್ವಾಭಿಮಾನದ ಮದುವೆ'ಯ ಪರಿಕಲ್ಪನೆಯನ್ನು ಪರಿಚಯಿಸಿದರು. ಪೌರೋಹಿತ್ಯದ ಮಧ್ಯಸ್ಥಿಕೆಯಿಂದ ಮದುವೆಯನ್ನು ಹೊರತಂದ ಪೆರಿಯಾರ್, ಮದುವೆ ಪ್ರಕ್ರಿಯೆಯನ್ನು ಚಳವಳಿಯಂತೆ ರೂಪಿಸಿದ್ದರು. ಅದನ್ನವರು 'ವೈಯಕ್ತಿಕ ಗೌರವದ ಮದುವೆ' ಎಂದು ಅರ್ಥೈಸಿದ್ದರು.

ಪೆರಿಯಾರ್ ಅವರ ಮದುವೆಯ ಪರಿಕಲ್ಪನೆಗೆ ಪೂರಕವಾಗಿ ಕುವೆಂಪು ಅವರ 'ಮಂತ್ರ ಮಾಂಗಲ್ಯ' ಪರಿಕಲ್ಪನೆಯನ್ನು ಗಮನಿಸಬಹುದು. ಕನ್ನಡ ಸಮಾಜದ ಆರೋಗ್ಯದ ಕುರಿತ ಕುವೆಂಪು ಚಿಂತನೆಯ ಭಾಗವಾಗಿ ನೋಡಬಹುದಾದ 'ಮಂತ್ರ ಮಾಂಗಲ್ಯ' 1966ರ ಸುಮಾರಿಗೆ ಕರ್ನಾಟಕದಲ್ಲಿ ಹೊಸ ರೂಪವನ್ನು ಪಡೆಯಿತು. ಅದು ಆಡಂಬರ ಮತ್ತು ಸಂಪ್ರದಾಯದ ವಿರುದ್ಧದ ಅಭಿವ್ಯಕ್ತಿಯಾಗಿತ್ತು. ಇದೇ ಮಾದರಿಯಲ್ಲಿ 'ವಚನ ಮಾಂಗಲ್ಯ', 'ರಿಜಿಸ್ಟರ್ ಮ್ಯಾರೇಜ್' (ಉಪನೋಂದಣಿ ಕಚೇರಿಯ ವಿವಾಹ) ಹಾಗೂ ಸಾಮೂಹಿಕ ಸರಳ ಮದುವೆಗಳನ್ನು ನೋಡಬಹುದು.